doc-143
T-P-2

SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 123 | ಬುಧವಾರ 9—1—46 | ಬೆಲೆ ಪ್ರತಿ 3 ಪೈ

ಶ್ರೀ ಸುಭಾಷರು ರಷ್ಯದಲ್ಲಿಲ್ಲ !

ಲಂಡನ್ ಜ 7 — ಯುದ್ಧಕಾಲದಲ್ಲಿ ಆಜಾದ್ ಹಿಂದ್ ಸರ್ಕಾರದ ನಾಯಕರಾಗಿದ್ದ ಶ್ರೀ ಸುಭಾಷರು ರಷ್ಯಾದಲ್ಲಿರುವರೆಂಬುದು ಒಂದು ಹುಚ್ಚು ಕಟ್ಟುಕತೆ ಎಂದು ಪ್ರವಾಡ ಪತ್ರಿಕೆಯಲ್ಲಿ ರಷ್ಯಾ ಪತ್ರಿಕೋದ್ಯೋಗಿ ಡೆವಿಚ್ ಜಾಸೆಲೆವ್‌ಸ್ಕೈರವರು ಕ್ರೋಧದಿಂದ ಬರೆದಿರುವರು.

ಮದರಾಸು, ಜ 7 — ಕಕ್ಕೈಗಾರನೊಬ್ಬನ ಕುಮಾರು 22 ರೂಪಾಯಿಗಳನ್ನು ದುರುಪಯೋಗಪಡಿಸಿಕೊಂಡ ಆಪಾದನೆ ಮೇಲೆ ರೋಕಿನಾಡು ಅಡ್ವೊಕೇಟ್ ಸೋಮಯಾಜಲುಯೆಂಬುವರು ವಕೀಲುತನ ನಡೆಸದಂತೆ ಹೈಕೋರ್ಟಿನ ಆಜ್ಞೆಯಾಗಿದೆ.

ನವದೆಹಲಿ, ಜ 7 — ನರೇಂದ್ರ ಮಂಡಲಿಯ ಮಂತ್ರಿಗಳ ಸಮಿತಿಯ ಸಭೆ ನಡೆಯಿತು.

ಪೂನಾ, ಜ 7 — ಹಿಂದೂ ಮಹಾಸಭೆಯ ಹಂಗಾಮಿ ಅಧ್ಯಕ್ಷರಾದ ಶ್ರೀ ಭೂಪಟ್ಕರರು ದೇಶದ ಎಲ್ಲಾ ಹಿಂದೂ ಮಹಾಸಭೆಗಳೂ ಜನವರಿ ತಾ || 23 ರಲ್ಲಿ ಶ್ರೀ ಸುಭಾಷ್‌ಚಂದ್ರಬೋಸರ ಜನ್ಮೋತ್ಸವವನ್ನಾಚರಿಸಬೇಕೆಂದು ಕೋರಿರುವರು.

ಲಂಡನ್, ಜ 9 ಪ್ರಪಂಚದ ಅತ್ಯಂತ ಪ್ರಖ್ಯಾತ ಕ್ರಿಕೆಟ್ ಆಟಗಾರ ಡಾನ್ ಬ್ರಾಡ್ಮೆನ್ ವಾಯುಯಾತನೆಯಿಂದ ನರಳುತ್ತಿದ್ದು ಆಟದಿಂದ ತಾತ್ಕಾಲಿಕ ನಿವೃತ್ತನಾಗಿದ್ದವನು, ಮತ್ತೆ ಈಗ ಆಟದಲ್ಲಿ ಭಾಗವಹಿಸಲು ಬಂದಿರುವನು.

ಹಂಗಳೂರು ಜ 5 — ಕೋಲಾರದ ನಾಲ್ಕು ಭಂಗಾರ ಗಣಿಗಳ ಸುಮಾರು ಇಪ್ಪತ್ತು ಸಾವಿರಕ್ಕೆ ನೇಲ್ಪಟ್ಟು ಕೆಲಸಗಾರರು ಮುಷ್ಕರವನ್ನು ಹೂಡಿರುವುದಾಗಿ ತಿಳಿಯಬಂದಿದೆ.

ಅಲಹಾಬಾದ್ ಜ 8— ಮೌಲಾನಾ ಅಬ್ದುಲ್ ಕಲಾಂ ಆಜಾದರಿಗೆ ಲಂಡನ್ನಿಂದ ಭಾರತ ಮಂತ್ರಿಗಳು ನರ್ಮಮಾನ ಕಳುಹಿಸಿ, ಮೌಲಾನಾರವರನ್ನೊಡನೆ ಪಾರ್ಲಿಮೆಂಟರಿ ರಾಯಭಾರವು ಖುದ್ದಾಗಿ ಸೇರಬೇಕೆಂದು ಇಚ್ಛಿಸಿರುವುದಾಗಿ ತಿಳಿಸಿರುವರು.

ಲಂಡನ್ ಜ 8— ಹೈದರಾಬಾದಿಗೆ ಕೋಕಿನಾಡಾ ರೇವನ್ನು ಡೊಂಕಿಸಿಕೊಳ್ಳುವ ಪ್ರಯತ್ನ ನಡೆಯುತ್ತಿರುವದೆಂದು ವರ್ತಮಾನ.

ಲಂಡನ್ ಜ 8— ಟರ್ಕಿ ರಷ್ಯಾವಿಗೆ ಹೊಡೆದಾಟವೆಂದು ಫ್ರೆಂಚ್ ಪತ್ರಿಕೆಯ ಬರಹ ಸುಳ್ಳೆಂದು ರಷ್ಯಾದವರು ಖಂಡಿಸಿರುವರು.

ಲಂಡನ್ ಜ 7 — ರಷ್ಯಾದವರು ತಾವೃತ್ತಿ ಹಿಡಿದ ಜರ್ಮನ್ ರಸಾಯನಿಕ ಶಾಸ್ತ್ರಜ್ಞರ ಸಹಾಯದಿಂದ ಶಯಾರಿಸುತ್ತಿರುವ ಹೊಸರೀತಿಯ ಆಟಂ ಬಾಂಬು ಇಂಗ್ಲಿಷ್ ಅಮೇರಿಕಾ ತಯಾರಿಗಿಂತ ಒಂದು ಮುಂದುವರಿದಿರುವುದೆಂದು ಹೇಳಲಾಗಿದೆ.

೨೪ ಘಂಟೆಗಳಲ್ಲಿ ಸ್ಥಳವನ್ನು ಬಿಡಿರಿ

ಪೌರಸಭೆಯ ಆಜ್ಞೆ

ಮೈಸೂರು, ಜ 9 — ಸ್ಥಳೀಯ ಪೌರಸಭೆಯಿಂದ ನಿನ್ನೆಯ ದಿವಸ ಬೆಳಿಗ್ಗೆ 11 ಘಂಟೆಯಲ್ಲಿ 'ಊಸಿಗ' ಬಜಾರ್' ಅಂಗಡಿಗಳಿಗೆ ೨೪ ಘಂಟೆಯ ಒಳಗೆ ಅಂಗಡಿಗಳನ್ನು ಖಾಲಿ ಮಾಡಿ ಸ್ಥಳವನ್ನು ತ್ಯಜಿಸಬೇಕೆಂದು ಆಜ್ಞೆ ಕೊಟ್ಟಿದ್ದು ಅಲ್ಲಿನವರುಗಳ ಸಭೆ ಸೇರಿತು. ಅಂಗಡಿಯವರೆಲ್ಲರೂ ಒಡಾಡಿನ್ನು ಖೀದಿಗೆ ಪಡೆದುಕೊಂಡ ಶ್ರೀ ನಾರಾಯಣರಾಯರ ಬಳಿ ಹೋಗಿ ತಮ್ಮ ಕಷ್ಟ ಸಂಗತಿಗಳನ್ನು ಅರಿಕೆ ಮಾಡಿಕೊಂಡು ಸ್ಥಳವನ್ನು ಬಿಟ್ಟುಕೊಡಲು ಕಾಲಾವಕಾಶ ಕೊಡಬೇಕೆಂದು ಪ್ರಾರ್ಥಿಸಿಕೊಂಡರು. ಶ್ರೀ ನಾರಾಯಣರಾಯರು ಪೌರಸಭೆಯ ಆಜ್ಞೆಯಂತೆ ನಡೆಯಬೇಕೆಂದರು. ಅಂಗಡಿ ಮೂಲೀಕರೆಲ್ಲರ ತಮ್ಮ ಕಷ್ಟ ನಿವಾರಣೆಯ ಬಗ್ಗೆ ಸಹಾಯಮಾಡಬೇಕೆಂದು ಪೌರಸಭೆಯ ಉಪಾಧ್ಯಕ್ಷರಾದ ಶ್ರೀ ಕೃಷ್ಣಮೂರ್ತಿರಾಯರಿಗೆ ಒಳಿ ನಿಯೋಗ ಹೋದರು. ಅವರು ಸಕಲವನ್ನೂ ಸಾವಧಾನದಿಂದ ಆಲಿತು ಸೂಕ್ತ ಕಾರ್ಯ ಕೈಗೊಳ್ಳುವುದಾಗಿ ಭರವಸೆಯಿತ್ತರು.

ಅವರಿಗೆಲ್ಲ ಕಾಲಪರಿಶಕೊಡಬೇಕೆಂದು ಉಪಾಧ್ಯಕ್ಷರು ಅಧ್ಯಕ್ಷರಿಗೆ ತಿಳಿಸಿರುವುದಾಗಿ ತಿಳಿಯಬಂದಿದೆ.

ಬೀದಿ ಹೋಟಲುಗಳು

ಮೈಸೂರು, ಜ 9

ಬೀದಿ ಹೋಟಲುಗಳ ಅವಾಂತರವನ್ನು ನಿರ್ಮೂಲ ಮಾಡುವ ಸಲುವಾಗಿ ಪೌರಸಭೆಯ ಆರೋಗ್ಯ ಶಾಖೆಯು ಸಧ್ಯದಲ್ಲಿಯೇ ಕಾರ್ಯಕ್ರಮವನ್ನು ಕೈಗೊಳ್ಳುವುದಾಗಿ ತಿಳಿಯಬಂದಿದೆ.

ಕಡಲೆಕಾಯಿ — ಬೆಲ್ಲ

ಮೈಸೂರು, ಜ 9

ರಾಜಧಾನಿಯು ರೇವ್ಯ ಡಿಪೋಗಳಲ್ಲಿ ನೆಲಗಡಲೆಕಾಯಿ ಮತ್ತು ಬೆಲ್ಲವನ್ನು ತೆಗೆಯುತ್ತಿರುವುದಾಗಿ ತಿಳಿಯಬಂದಿದೆ.

ಸಕ್ಕರೆ ಸರಬರಾಜು

ಮೈಸೂರು, ಜ ೪

ರಾಜಧಾನಿಯಲ್ಲಿ ತಿಂಗಳಿಗೆ ಮೂರು ಸಾವಿರ ಮೂಟೆ ಸಕ್ಕರೆ ಸಾರ್ವಜನಿಕರಿಗಾಗಿ ಸರಬರಾಜಾಗುತ್ತಿರುವುದಾಗಿ ತಿಳಿಬಂದಿದೆ.

ದೆಹಲಿ ದಂಡಿನಲ್ಲಿ ಐ.ಎನ್.ಎ. ವಿಚಾರಣೆ

ಇದೇ ಜನವರಿ 2 ನೇ ತಾರೀಖಿನಿಂದ ಪ್ರಕಟಿಸಿದ ಕೆಂಪುಕೋಟೆಗೆ ಬದಲಾಗಿ ದೆಹಲಿಯ ದಂಡಿನಲ್ಲಿ ಐ.ಎನ್.ಎ. ವಿಚಾರಣೆ ನಡೆಯುತ್ತಿದೆ. (ಐ. ಪಿ.)

ಶ್ರೀ ನಾರಾಯಣ ಪ್ರಕರಣ

ಪತ್ರಿಕೋದ್ಯೋಗಿಗಳ ಪ್ರತಿಭಟನೆ

ಮೈಸೂರು, ಜ 9 — ಈ ದಿವಸ ಬೆಳಿಗ್ಗೆ 10 ಘಂಟೆಯಲ್ಲಿ ಸ್ಥಳೀಯ ಪತ್ರಿಕೋದ್ಯೋಗಿ ಸುಫದಲ್ಲಿ ಸೇರಿದ್ದ ವಿಶೇಷ ಸಭೆಯಲ್ಲಿ ಡೇಲಿನ್ಯೂಸ್ ಪಂದಿಗಾರರಾದ ಶ್ರೀ ನಾರಾಯಣರಿಗೆ ಜಿಲ್ಲಾಧಿಕಾರಿಗಳು ಕಳುಹಿಸಿದ ಬಗ್ಗೆ ತೀವ್ರ ಪ್ರತಿಭಟನೆ ನಡೆದು ನೋಟಿಸನ್ನು ವಾಪಸು ಪಡೆಯುವಂತೆ ಕೋರುವ ಠರಾವಾಯಿತು. ಶ್ರೀ ರಂಗಯ್ಯನವರು ಅಗತ್ಯಸನ ಪಡಿಸಿದ್ದರು. ಸಭಾರಂಭದಲ್ಲಿ ಶ್ರೀ ಶ್ರೀಕಂಠಯ್ಯನವರ ನಿಧನದ ಬಗ್ಗೆ ಸಂತಾಪಸೂಚನೆಯು ನಿರ್ಣಯವಾಯಿತು. ಕಾರ್ಯದರ್ಶಿ ಶ್ರೀ ಕುಮಾರಸ್ವಾಮಿಯವರಿಂದ ವಂದನಾರ್ಪಣೆಯಾದನಂತರ ಸಭೆಯು ಮುಗಿಯಿತು.

ಸಯಾಂನಲ್ಲಿ ಜಪಾನಿಗಳೆಲ್ಲ ನಿರಸ್ತ್ರರಾದರು

ಆಲ್ಪ್ಸೀ ಕೇಂದ್ರ, ಜ 2 — ಸೆಯಾಮಿನಲ್ಲಿ ಜಪಾನಿಗಳ ನಿಶಸ್ತ್ರೀಕರಣ ಕಾರ್ಯ ಪೂರ್ತಿಯಾಯಿತು ಇನ್ನು 600 ಮಂದಿ ಮಾತ್ರ ಉಳಿದಿದ್ದಾರೆ 2 ನೆ ಭಾರತ ದಳಕ್ಕೆ ಶರಣಾಗತರಾದ ಜಪಾನಿಗಳು 112630 ಆಯುಧಗಳನ್ನು ಒಪ್ಪಿಸಿಕೊಟ್ಟಿದ್ದಾರೆ ಈಗ 4512 ಜಪಾನಿ ಕತ್ತಿಗಳನ್ನು ಮಿತ್ರ ಪಡೆಯ ಅಧಿಕಾರಿಗಳಿಗೆ ಬಹುಮಾನವಾಗಿ ಹಂಚಲಾಗಿದೆ (ಐ ಪಿ)

ಟಾಗೂರ್ ಉಪನ್ಯಾಸ ಮಾಲೆ

ಏರ್ಪಾಡಿನ ರಾಷ್ಟ್ರೀಯ ವಿಶ್ವವಿದ್ಯಾನಿಲಯದಲ್ಲಿ ಭಾರತ ಕಲೆಯ ಟಾಗೂರು ಉಪನ್ಯಾಸದ ಏರ್ಪಾಡು ಆಗುತ್ತಿದೆ

ಮುಷ್ಕರವಾಗದಿರಲು

ಗ್ರೀಸಿನ ಸರ್ಕಾರದವರು ಮುಷ್ಕರ ಮಾಡುತ್ತೇನೆಂದು ಹೆದರಿಸುತ್ತಿರುವ ತಮ್ಮ ಅಧಿಕಾರಿಗಳು ಮತ್ತು ನೌಕರರಿಗೆ ಉಚಿತವಾಗಿ ಒಟ್ಟೆ ಬದಗಿಸಲು ಮೂರು ಮಿಲಿಯ ಸೌಂಡು ನೂಲು ಮತ್ತು ಬಟ್ಟೆಯನ್ನು 18000 ಸಿದ್ಧವಾದ ಉಡುಪನ್ನು ಇಟ್ಟಿದ್ದಾರೆ

ಟೋಜೋ ಮೊಕದ್ದಮೆ ಸಿದ್ಧತೆ

ಲಂಡನ್, ಜ 6 — ಟೋಕಿಯೊದಲ್ಲಿನ ಮೆಕ್ಆರ್ಥರ್‌ರವರ ಕಛೇರಿ ಅಧಿಕಾರಿಯೊಬ್ಬರು ತಿಳಿಸಿರುವಂತೆ ಟೋಜೋ ಮೇಲಿನ ಮೊಕದ್ದಮೆಯ ವಿಷಯ ಸಿದ್ಧಪಡಿಸಲಾಗಿದೆ

ವಿಶ್ವ ಪರಿವಾರ ಸಮ್ಮೇಳನಾರ್ಥ ಶ್ರೀ ಮನ್ಮಹಾರಾಜರವರು ಮಂಗಳೂರಿಗೆ ಪ್ರಯಾಣ ಬೆಳೆಸಿ ಊರಿಗೆ ಹೊರಟು ಅಲ್ಲಿಂದ ಬೆಳಿಗ್ಗೆ ಪ್ರಯಾಣ ಪತ್ರೀಲನೆಗಾಗಿ ಕೋಲಾರ ತಲುಪಿದರು. ಜಿಲ್ಲಾಧಿಕಾರಿಗಳು ಸ್ವಾಗತ ಸಮಾರಂಭ

ಸತ್ಕಾರ ಸಮಾರಂಭ

ಮೈಸೂರು, ಜ ೨ — ಮೈಸೂರು ಬಟ್ಟೆ ವರ್ತಕರ ಸಂಘದ ಅಧ್ಯಕ್ಷರಾದ ಜ || ಜಿ. ಅಹಮದ್ ಖಾರ್ ರವರ ಗೌರವಾರ್ಥವಾಗಿ ಕಳೆದ ಸಂಜೆ ೬ ಘಂಟೆಯಲ್ಲಿ ಮಿತ್ರ ಸಮಿತಿಯವರು ಶ್ರೀ ಚಾಮುಂಡೇಶ್ವರಿ ಭವನದಲ್ಲಿ ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದರು. ಶ್ರೀ ಶ್ರೀನಿವಾಸರಾಯರು ಅತಿಥಿಗಳನ್ನು ಸ್ವಾಗತಿಸಿದರು.

ಶ ಚಿರುಚಿಯೂಡ ಉಪಹಾರವಾದ ನಂತರ ಮಿತ್ರ ಸಮಿತಿಯ ಪರವಾಗಿ ಶ್ರೀ ನಂಜಪ್ಪ ಶಟ್ಟರು ಭಾಷಣ ಮಾಡುತ್ತಾ ' ಶ್ರೀ ಅಹಮದ್ ಖಾರ್ ರವರ ಗುಣ ಪೌರುಷ, ಪ್ರತಿನಿಧಿ ಸಭೆ ಮತ್ತು ಪೌರಸಭೆಯ ಸದಸ್ಯರಾಗಿ ಅವರು ಮಾಡುತ್ತಿರುವ ಸಾರ್ವಜನಿಕ ಸೇವೆ, ಬಟ್ಟೆ ವ್ಯಾಪಾರಿ ಸಂಘ ಸ್ಥಾಪನೆಯಾಗಬೇಕೆಂದು ಸಲಹೆಯನ್ನಿತ್ತು, ಆದ ಸ್ಥಾಪನೆಗಾಗಿ ಅವಿಶ್ರಾಂತರಾಗಿ ದುಡಿದು ನಮಗೂ ಮತ್ತು ಸಾರ್ವಜನಿಕರಿಗೂ ಬಟ್ಟೆ ದೊರೆಯಲು ಸುಲಭ ಮಾರ್ಗವನ್ನು ಮಾಡಿರುವುದು, ಅವ್ಯಾ ಪ್ರತಿ ಸ್ಪರ್ಧಾರಹಿತ ದ್ವಿತೀಯ ಅಧ್ಯಕ್ಷ ಪದವಿಯನ್ನು ' ಕುರಿತು ಸರಳವಾಗಿ ವಿವರಿಸಿದರು.

ಗಣ್ಯ ಅತಿಥಿ ಜ || ಅಹಮದ್ ಖಾರ್ ರವರು ಸೂಕ್ತವಾಗಿ ಉತ್ತರವೀಯುತ್ತಾ ಸಂಘ ಸ್ಥಾಪನೆಯಾದುದು ವರ್ತಕರಲ್ಲಿ ಒಗ್ಗಟ್ಟನ್ನುಂಟು ಮಾಡಿರುವುದಾಗಿಯೂ, ಸಿವಿಲ್ ಸಪ್ಲೈಸ್ ಇನ್ಸ್‌ಪೆಕ್ಟರ್ ಶ್ರಿ ನಾರಾಯಣರಾಯರ ಸಹಕಾರದಿಂದ ಸಂಘ ಬೆಳವಣಿಗೆಯಾಗುತ್ತಿರುವುದಾಗಿಯೂ, ಶ್ರೀಗಳಾದ ಸಂಜಪ್ಪಶೆಟ್ಟರು ರಂಗಸ್ವಾಮಯ್ಯನವರು ಮತ್ತು ಶ್ರೀನಿವಾಸರಾಯರು ಸಂಘಕ್ಕೆ ಸಲ್ಲಿಸುತ್ತಿರುವ ಸೇವೆಯು ಅಮೂಲ್ಯವಾದುದೆಂದು ತಿಳಿಸಿದರು.

ಶ್ರೀರಂಗಸ್ವಾಮಯ್ಯನವರು ಆಗಮಿಸಿದ ಅತಿಥಿಗಳಿಗೆ ವಂದನಾರ್ಪಣೆ ಮಾಡಿದನಂತರ ಶ್ರೀಮನ್ಮಹಾರಾಜರ ಶ್ರೇಯಃ ಪ್ರಾರ್ಥನೆಯೊಡನೆ ಸಮಾರಂಭವು ವ್ಯವಸ್ಥಿತವಾಯಿತು.

ಮೈಸೂರು ಸಾಹಿತ್ಯ ಮಂದಿರದಲ್ಲಿ ಮೊನ್ನೆಯ ದಿವಸ ನಡೆದ ಸಭೆಯಲ್ಲಿ ಶ್ರೀ ಬಿ. ಎಂ. ಶ್ರೀಕಂಠಯ್ಯನವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯವಾಯಿತು.

ರಾಯಲ್ ಇಂಡಿಯರ್ ಸೇವಿ

ಸತ್ಯವಾದಿ
ದಿನ ಪತ್ರಿಕೆ
ಸ್ಥಳದಲ್ಲಿ — ತಿಂಗಳಿಗೆ 6 ಆಣೆ
ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ. ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0
ಮ್ಯಾನೇಜರ್, ಸತ್ಯವಾದಿ,
ಚಾಮರಾಜಪುರಂ, ಮೈಸೂರು

At Ranjit
ಪೃಥ್ವಿರಾಜ್, ಷಮ್ಮಿ, ಮೋನಿಕಾ, ದೇಶಾಯಿ, ಮುಂತಾದವರು ನಟಿಸಿರುವ
— ಗೌರಿ —
(ಹಿಂದಿ)
27-12-45 ರಿಂದ ಪ್ರತಿದಿನ 3 ಆಟ
3-30, 6-30 ಮತ್ತು 9-45 ಕ್ಕೆ

At Opera — 3 ನೇ ವಾರ
ತ್ಯಾಗರಾಜ ಭಾಗವತರ್ — ನಾಗಯ್ಯ — ಕನ್ನಾಂಬಾ
ನಾಟ್ಯವಹಿಸಿರುವ
ಅಶೋಕ ಕುಮಾರ (ತಮಿಳು)

ಅಕ್ಕರ
ಸಾಮಾಜಿಕ
ಭಾವಪರಿಪೂರ್ಣವಾದ ಕಥೆ
ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.
ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್, ಮೈಸೂರು

ಹಸಕ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ
ರಾವಂದೂರ್ ವೀರಶೆಟ್ಟಿ & ಸನ್ಸ್
ಶಿವರಾಂಪೇಟೆ ಮೈಸೂರು.

L. N. Press
Srirampet MYSORE
For Good Printing

Edited, Printed and published by M. S. Krishna Rao, at the Satyavadi Press, Chamaraja Agrahar, Mysore

ರಕ್ತವರ್ಧಿಗೆ – ಧಾತುಪುಷ್ಟಿಗೆ ಸಂಜೀವನ
ಶ್ರೀ ಕೃಷ್ಣ ಸುಧಾ
ಬೆಲೆ ಡಬ್ಬಿಗೆ ಒಂದು ರೂಪಾಯಿ
ವಿಳಾಸ — ಶಕ್ತಿ ಸುಧಾ, ೧೦೬೭ ಚಾಮರಾಜಪುರಂ, ಮೈಸೂರು